## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372 / 2022

**ಚಾಸಾ ಃ- 10 / ಪ್ರಾಸಾ ಃ- 12**

| | |
|---|---|
| ಹೆಸರು | ಲೋಕೇಶ್ |
| ತಂದೆ ಹೆಸರು | ಲಿಂಗಯ್ಯ |
| ವಯಸ್ಸು | 46 |
| ಉದ್ಯೋಗ | ಲ್ಯಾಬ್ ಟೆಕ್ನೀಷಿಯನ್ |
| ವಿಳಾಸ | ಮಾಗಡಿ |

**ದಿನಾಂಕಃ 28.02.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1 ರವರ ಹೆಸರು ಅಷ್ಟು ಗೊತ್ತಿರುವುದಿಲ್ಲ. 1ನೇ ಆರೋಪಿಯು ಮನೆಯ ಮೇಲೆ ಬಾಡಿಗೆ ಇದ್ದರು ಆದರೆ ಅವರ ಹೆಸರುಗಳು ಗೊತ್ತಿರುವುದಿಲ್ಲ. 2 ಮತ್ತು 3 ನೇ ಆರೋಪಿಗಳು ಗೊತ್ತಿರುವುದಿಲ್ಲ. ಚಾಸಾ 1 ಮತ್ತು 1 ನೇ ಆರೋಪಿಯು ನಮ್ಮ ಮನೆಯ ಮೇಲೆ ಬಾಡಿಗೆ ಇದ್ದರು. ಆದರೆ ಅ ವ ಜಗಳದ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ. ಚಾಸಾ 1 ಮತ್ತು 1 ನೇ ಆರೋಪಿಯು ಮನೆಯಲ್ಲಿ ಬಾಡಿಗೆ ಇರುವ ಸಂಬಂಧ ಠಾಣೆಗೆ ಕರೆಸಿದ್ದರು. ಆಗ ಸಹಿ ಮಾಡಿರುತ್ತೇನೆ. ಉಳಿದ ವಿಚಾರ ನನಗೆ ಏನೂ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

2020ರ ನವೆಂಬರ್ ತಿಂಗಳಿನಲ್ಲಿ ಚಾಸಾ 1 ಮತ್ತು 1ನೇ ಆರೋಪಿಗಳು ಬಾಡಿಗೆ ವಾಸಕ್ಕೆ ಬಂದು ವಾಸವಾಗಿದ್ದರು ಎಂದರೆ ಸಾಕ್ಷಿ ವಾಸವಾಗಿದ್ದರು ಆದರೆ ಇಸವಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು ಮೇಲ್ಕಂಡ ಮನೆಯಲ್ಲಿ ವಾಸವಿದ್ದ ಒಂದು ತಿಂಗಳ ನಂತರ ಇಬ್ಬರೂ ಆಗಾಗ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಏರು ಧ್ವನಿಯಲ್ಲಿ ಚಾಸಾ 1 ರವರಿಗೆ

ನಿಮ್ಮಪ್ಪನ ಮನೆಯಿಂದ ಏನು ತಂದಿದ್ದೀಯಾ ಕಾರು ಮತುತ ಜಮೀನನ್ನು ಬರೆಸಿಕೊಂಡು ಬಾ ಎಂದು ಎಷ್ಟು ಭಾರಿ ನಿನಗೆ ಹೇಳುವುದು ಎಂದು ಕೆಟ್ಟ ಮಾತುಗಳಿಂದ ಬೈಯ್ಯುತ್ತ ಜಗಳ ಮಾಡುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಗಂಡ ಮತ್ತು ಹೆಂಡತಿಯ ವಿಚಾರವೆಂದು ಹೆಚ್ಚಾಗಿ ತಿಳಿದುಕೊಳ್ಳಲಿಲ್ಲವೆಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ಹೆಂಡಡತಿ ಇಬ್ಬರೂ ಟೆರೇಸ್ ಮೇಲೆ ಹೋಗಿದ್ದಾಗ ಚಾಸಾ 1 ರವರು ಅಳುತ್ತಾ ಕೂತಿದ್ದು ಆಗ ನೀವಿಬ್ಬರೂ ಸಹ ಅವರನ್ನು ವಿಚಾರ ಮಾಡಲಾಗಿ ಚಾಸಾ 1 ಮತ್ತು 1 ನೇ ಆರೋಪಿಯು ಪ್ರೀತಿಸಿ ಕುಟುಂಬದವರ ಒಪ್ಪಿಗೆ ಪಡೆದು ಮದುವೆಯಾಗಿದ್ದು ಎಂದು ತಿಳಿಸಿದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮದುವೆ ವೇಳೆ ನನಗೆ ಒಡವೆಯನ್ನು ಕೊಟ್ಟಿದ್ದು ಆದರೆ ಈಗ ಸೃಜನ್ ಹಾಗೂ ಅವರ ಮನೆಯವರು ನನ್ನ ಮೇಲೆ ಗಲಾಟೆ ಮಾಡುತ್ತಾ ವರದಕ್ಷಿಣೆಗಾಗಿ ನಿಮ್ಮ ಅಪ್ಪನ ಮನೆಯಿಂದ ಒಂದು ಇನೋವಾ ಕಾರ್ ಹಾಗೂ ಜಮೀನನ್ನು ಬರೆಸಿಕೊಂಡು ಬಾ ಎಂದು ಒತ್ತಾಯ ಮಾಡುತ್ತಾ ಗಲಾಟೆ ಮಾಡಿ ತೊಂದರೆ ನೀಡುತ್ತಿರುತ್ತಾರೆ ಎಂದು ತಿಳಿಸಿದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿತಿಯುತ್ತಾರೆ. ಆಗ ನೀವು ದೊಡ್ಡವರನ್ನು ಕೂರಿಸಿ ಮಾತನಾಡಿಸಿ ಇತ್ಯರ್ಥ್ಯ ಪಡಿಸಿಕೊಳ್ಳಿ ಎಂದು ತಿಳಿಸಿರುತ್ತೀ಼ರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2021 ನೇ ಇಸವಿಯ ಜೂನ್ ತಿಂಗಳ ಕೊನೆಯ ವಾರದ ಒಂದು ದಿನ ರಾತ್ರಿ ವೇಳೆ 1 ನೇ ಆರೋಪಿಯು ಚಾಸಾ 1 ಮತ್ತು ಅವರ ತಂದೆಯವರ ಮೇಲೆ ಗಲಾಟೆ ಮಾಡಿ ಮನೆಯಿಂದ ಹೊರಗೆ ಕಳುಹಿಸಿದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಂತತರ ಸ್ವಲ್ಪ ದಿನದಲ್ಲೆ ಅವರೂ ಸಹ ಮನೆಯನ್ನು ಖಾಲಿ ಮಾಡಿಕೊಂಡು ಹೊದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ 1 ರವರು ಆರೋಪಿಗಳ ವಿರುದ್ದ ದೂರನ್ನು ದಾಖಲಿಸಿದ ವಿಚಾರ ಗೊತ್ತಯಿತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಸಂಬಂಧ ದಿನಾಂಕ 28.02.2022 ರಂದು ಪೋಲಿಸರಿಗೆ ಹೇಳಿಕ ನೀಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರೂ ಆರೋಪಿಗಳಿ ಸಹಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ನಿಪಿ-19 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ-**

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**